ಶ್ರೀ ಕೊಂಡಜ್ಜಿ ಬಸಪ್ಪ.—ಈಗ ತಾಲ್ಲೂಕು ಬೋರ್ಡ್ ಕೆಲವು ಕೆರೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಿರುವುದರಿಂದ ಅಲ್ಲಿನ ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಅಲ್ಲದೆ ಒಂದುವೇಳೆ ತಾಲ್ಲೂಕ್ ಬೋರ್ಡಿನವರು ದುಡ್ಡು ಖರ್ಚುಮಾಡಲಲ್ಲವೆಂದಾಕ್ಷಣಕ್ಕೆ ಅವರು ಚೆನ್ನಾಗಿ ಕೆಲಸ ಮಾಡಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲೇನಾದರೂ ಚೆಕ್ಕಿಕಲ್ ಅಸಿಸ್ಟೆನ್ಸ್ ಇಲ್ಲದೆ ಖರ್ಚು ಮಾಡದೇ ಇರಬಹುದು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಸನ ಜಿಲ್ಲೆಯ ತಾಲ್ಲೂಕ್ ಬೋರ್ಡಿನವರು ಕೆರೆಗಳ ದುರಸ್ತಿಗಾಗಿ ಕೊಟ್ಟಿರತಕ್ಕ ಹಣ ಸಾಕಾಗುವುದಿಲ್ಲವೆಂದು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—That does not arise.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ರೀತಿ ಕೊಟ್ಟ ಗ್ಯಾರಂಟಿನ್ನು ಪೂರ್ತಿಯಾಗಿ ಖರ್ಚು ಮಾಡದೇ ಇರುವವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಕೆರೆಗಳ ನಿರ್ಮಾಣಕ್ಕೆ ಸಾಕಷ್ಟು ಹಣ ಕೊಡದೇ ಹೋದರೆ ಮತ್ತೆ, ಯಾರಲ್ಲಿ ಮೊರೆ ಹೋಗಬೇಕು ? ಏತಕ್ಕೋಸ್ಕರ ಖರ್ಚು ಮಾಡಲಿಲ್ಲವೆಂಬುದನ್ನಾದರೂ ತನಿಖೆ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವ ಕಾರಣದಿಂದ ಲ್ಯಾಪ್ಸ್ ಆಗಿದೆ ಯೆಂಬುದನ್ನು ತನಿಖೆ ಮಾಡಿ ಮುಂದೆ ತಗಾದೆ ಮಾಡುತ್ತೇವೆ.

Mr. SPEAKER.—Question hour is over.

QUESTIONS FOR ANSWERS ON THE DAY
(but not taken up)

Sanctioning of a Maternity Home to Kathalagere Village in Channagiri Taluk.

*Q.—172. Sri KUNDUR RUDRAPPA (Channagiri).—

Will the Government be pleased to state :—

(*a*) whether they have not given an assurance to the people of Kathalagere Village in Channagiri Taluk, that the L.F. Dispensary would be converted into a Maternity Home with an estimated cost of Rs. 32,000;

(*b*) whether it is not a fact that the villagers have remitted Rs. 2,000 as their contribution for the same, in addition to Rs. 8,000, already contributed by them ;

(*c*) the action they have taken to sanction the Maternity Home to Kathalagere Village ?

A.— Sri K. NAGAPPA ALVA (Minister for Health).—

(*a*) Government are not aware of any such assurance.

(*b*) It is reported that villagers have contributed only Rs. 2,000 for the construction of the dispensary building.

(*c*) A Maternity Home to Kathalagere cannot be considered as there is already a dispensary at Kulambi having maternity facilities which is only two miles away from Kathalagere.